# ಫೇಸ್‌ಆ್ಯಪ್ ಓಕೆ, ಕ್ಲೌಡ್ ಸ್ಟೋರೇಜ್ ಯಾಕೆ?




**ಯುವಕರು ಮುದುಕರಾದಾಗ ಹೇಗೆ ಕಾಣುತ್ತಾರೆಂಬ ಅಂಶಕ್ಕೆ ಫೇಸ್‌ಆ್ಯಪ್ ಸುದ್ದಿಯಲ್ಲಿದ್ದು, ಖಾಸಗಿತನಕ್ಕೆ ಧಕ್ಕೆಯಾಗುವ ಆತಂಕವೂ ಎದುರಾಗಿದೆ**

■ ಸಿರಿ

ಟಿಕ್‌ಟಾಕ್ ಮಾದರಿಯಲ್ಲೇ ಈಚೆಗೆ ಎಲ್ಲೆಡೆ ಟ್ರೆಂಡ್ ಸೃಷ್ಟಿಸುತ್ತಿರುವ 'ಫೇಸ್‌ಆ್ಯಪ್' (FaceApp), ಸಾಮಾನ್ಯರಿಂದ ಸೆಲೆಬ್ರಿಟಿಗಳವರೆಗೆ ಸಾಕಷ್ಟು ಜನಪ್ರಿಯಗೊಂಡಿದೆ. ಈ ಜನಪ್ರಿಯತೆಯ ನಡುವೆ ಖಾಸಗಿ ಮಾಹಿತಿಯ ಸುರಕ್ಷತೆಯ ಬಗ್ಗೆ ಬಳಕೆದಾರರು ನಿರ್ಲಕ್ಷ್ಯ ವಹಿಸುತ್ತಿರುವುದು ಚರ್ಚೆಗೆ ಕಾರಣವಾಗಿದೆ.

ಈ ಆ್ಯಪ್‌ನಲ್ಲಿ ಸ್ವಯಂಚಾಲಿತವಾಗಿ ಒಬ್ಬ ವ್ಯಕ್ತಿಯ ಫೋಟೊವನ್ನು ಇನ್ನಷ್ಟು ಸುಂದರವಾಗಿ, ವಿವಿಧ ಕೇಶ ವಿನ್ಯಾಸದ ರೂಪದಲ್ಲಿ, ವಯಸ್ಸು ಕಡಿಮೆ ಹಾಗೂ ಹೆಚ್ಚಾದಂತೆ ಮಾಡಬಹುದಾಗಿದೆ. ಎಲ್ಲಕ್ಕಿಂತ ಮಿಗಿಲಾಗಿ, ಯುವಕರು ಮುದುಕರಾದ ಮೇಲೆ ಹೇಗೆ ಕಾಣಿಸುತ್ತಾರೆ ಎನ್ನುವ ಕುತೂಹಲಕಾರಿ ಅಂಶ ಸಾಮಾಜಿಕ ಜಾಲತಾಣದಲ್ಲಿ ಒಮ್ಮೆಗೇ ಟ್ರೆಂಡ್ ಸೃಷ್ಟಿಸುವಂತೆ ಮಾಡಿದೆ. ಹೀಗಾಗಿಯೇ, ಬಹುತೇಕರು ಈ ಆ್ಯಪ್ ಡೌನ್‌ಲೋಡ್ ಮಾಡಲು ಮುಗಿಬಿದ್ದಿದ್ದಾರೆ.

ಸ್ಮೈಲ್ (ಮುಖದಲ್ಲಿ ನಗು ಬೀರಿಸುವುದು), ಇಂಪ್ರೆಷನ್ (ಫೋಟೊ ಇಷ್ಟವಾಗುವಂತೆ ಮಾಡುವುದು–ಪ್ರಭಾವ ಬೀರುವಂತೆ ಮಾಡುವುದು), ಏಜ್ (ವಯಸ್ಸಾದಂತೆ ಮಾಡುವುದು), ಬಿಯರ್ಡ್ (ಗಡ್ಡವಿರುವಂತೆ ಬದಲಿಸುವುದು), ಹೇರ್ ಕಲರ್ (ಕೇಶವನ್ನು ಬಣ್ಣಗಳಲ್ಲಿ ಮಾರ್ಪಡಿಸುವುದು), ಹೇರ್ ಸ್ಟೈಲ್ (ವಿವಿಧ ರೀತಿಯಲ್ಲಿ ಕೇಶ ವಿನ್ಯಾಸ ಮಾಡುವುದು), ಗ್ಲಾಸಸ್ (ಸ್ಟೈಲಿಷ್ ಕನ್ನಡಕ ಧರಿಸಿದಂತೆ ಮಾಡುವುದು), ಮೇಕಪ್ (ಮುಖಕ್ಕೆ ಅಲಂಕಾರ ಮಾಡುವುದು) ಆಪ್ಷನ್‌ಗಳು ಈ ಆ್ಯಪ್‌ನಲ್ಲಿ ಲಭ್ಯ. ಈ ಎಲ್ಲ ಸೌಲಭ್ಯಗಳನ್ನು ಬಳಸಿ ಬಳಕೆದಾರರು ತಮಗೆ ಬೇಕಾದಂತೆ ತಮ್ಮ ಅಥವಾ ತಮಗಿಷ್ಟವಾದ ವ್ಯಕ್ತಿಗಳ ಫೋಟೊಗಳನ್ನು ಮಾರ್ಪಡಿಸಿ ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಳ್ಳುತ್ತಿದ್ದಾರೆ.

ಈ ಆ್ಯಪ್ ಅನ್ನು ಡೌನ್‌ಲೋಡ್ ಮಾಡಿಕೊಂಡು ಇನ್‌ಸ್ಟಾಲ್ ಮಾಡುವಾಗ ಕೆಲವೊಂದು ನಿಯಮಗಳನ್ನು ಕಡ್ಡಾಯವಾಗಿ ಪಾಲಿಸಲೇಬೇಕಾಗುತ್ತದೆ. ಅದೇನೆಂದರೆ, ಆ್ಯಪ್ ಇನ್‌ಸ್ಟಾಲ್ ಮಾಡುವಾಗ 'ಕ್ಲೌಡ್ ಫೋಟೊ ಪ್ರೊಸೆಸಿಂಗ್' ಎಂಬ ಕಿರು ಸಂದೇಶ ಡಿಸ್‌ಪ್ಲೇ ಮೇಲೆ ತೆರೆದುಕೊಳ್ಳುತ್ತದೆ. ಅದರಲ್ಲಿ, 'ನೀವು ಎಡಿಟ್ ಮಾಡಬಯಸುವ ಪ್ರತಿಯೊಂದು ಫೋಟೊಗಳು, ಅವುಗಳ ಬದಲಾವಣೆಗೆ ಹಾಗೂ ಮುಖ ಪರಿವರ್ತನೆ ಸಲುವಾಗಿ ನಮ್ಮ (ಫೇಸ್‌ಆ್ಯಪ್ ಕಂಪನಿ) ಸರ್ವರ್‌ಗೆ ಅಪ್‌ಲೋಡ್ ಆಗುತ್ತವೆ' ಎಂಬ ಮಾಹಿತಿ ಇರುತ್ತದೆ. ಇದಕ್ಕೆ ಬಳಕೆದಾರರು ಒಪ್ಪಿಕೊಂಡರೆ ಮಾತ್ರ ಆ್ಯಪ್‌ನಲ್ಲಿ ಮುಂದುವರೆಯಲು ಸಾಧ್ಯ. ಇಲ್ಲವಾದರೆ, ನೀವು (ಬಳಕೆದಾರರು) ಆ್ಯಪ್‌ನಲ್ಲಿ ಮುಂದುವರೆಯಲು ಸಾಧ್ಯವಿಲ್ಲ.




ಅನೇಕ ಬಳಕೆದಾರರು ಕಣ್ಣುಮುಚ್ಚಿಕೊಂಡು ಹಿಂದುಮುಂದು ಆಲೋಚನೆ ಮಾಡದೇ ಆ್ಯಪ್‌ನ ನಿಬಂಧನೆಗಳಿಗೆ ಒಪ್ಪಿಗೆ ಸೂಚಿಸುತ್ತಾರೆ. ಈ ವಿಚಾರ ಸಮಸ್ಯೆಗೆ ಎಡೆಮಾಡಿಕೊಟ್ಟಿದ್ದು, ಆ್ಯಪ್ ಬಳಕೆದಾರರ ಖಾಸಗಿ ಫೋಟೊಗಳು ಬೇರೊಂದು ಕಂಪನಿಯ ಸರ್ವರ್‌ಗೆ ಅಪ್‌ಲೋಡ್ ಆಗುವುದು ಎಷ್ಟು ಸರಿ ಹಾಗೂ ಹಾಗೆ ಅಪ್‌ಲೋಡ್ ಆದ ಫೋಟೊಗಳು ಸುರಕ್ಷಿತ ಎಂಬ ಪ್ರಶ್ನೆ ಉದ್ಭವವಾಗುತ್ತದೆ. ಈ ಪ್ರಶ್ನೆಗೆ ಆ್ಯಪ್ ಒಡೆತನದ ಕಂಪನಿ ಸ್ಪಷ್ಟವಾಗಿ ಎಲ್ಲೂ ತಿಳಿಸಿಲ್ಲ.

ಆ್ಯಪ್‌ನ ಎಲ್ಲ ನಿಬಂಧನೆಗಳಿಗೂ ಒಪ್ಪಿಗೆ ಸೂಚಿಸಿ ಲಾಗಿನ್ ಆದರೆ, ಫೇಸ್‌ಆ್ಯಪ್ ಬಳಸಿ ರಚಿಸಿದ ಫೋಟೊಗಳನ್ನು ಯಾವಾಗ, ಹೇಗೆ ಬೇಕಾದರೂ, ಎಲ್ಲಿಯಾದರೂ, ಯಾವುದೇ ಪೂರ್ವಾನುಮತಿ ಇಲ್ಲದೆ ಬಳಸಬಹುದಾದ ಹಕ್ಕನ್ನು ಕಂಪನಿಗೆ ಕೊಟ್ಟಂತಾಗುತ್ತದೆ. ನಮ್ಮ ಹೆಸರು, ನಿಮ್ಮ ಯೂಸರ್‌ನೇಮ್ ಅಥವಾ ನೀವು ಅನುಮತಿ ನೀಡಿರುವ ಯಾವುದೇ ಡಾಟಾವನ್ನು ಹೇಗಾದರೂ ಬಳಸುವ ಕುರಿತು ಅನುಮತಿ ನೀಡಿದಂತಾಗುತ್ತದೆ.

ಆ್ಯಪ್‌ನಲ್ಲಿ ಎಡಿಟ್ ಮಾಡಿದ ಫೋಟೊಗಳನ್ನು ತಮ್ಮ ಮೊಬೈಲ್‌ನಲ್ಲಿ ಡಿಲೀಟ್ ಮಾಡಿದರೂ ಅವು ಆ್ಯಪ್‌ನ ಕ್ಲೌಡ್ ಸ್ಟೋರೇಜ್‌ನಲ್ಲಿ ಸೇವ್ ಆಗಿರುತ್ತವೆ. ಹಾಗೆ ಸೇವ್ ಆದ ಫೋಟೊಗಳನ್ನು ಡಿಲೀಟ್ ಮಾಡುವ ಆಯ್ಕೆ ಬಳಕೆದಾರರಿಗೆ ನೀಡಿಲ್ಲ. ಹೀಗಾಗಿ, ಖಾಸಗಿತನಕ್ಕೆ ತೀರಾ ಧಕ್ಕೆಯಾಗದಂತಹ ಫೋಟೊಗಳನ್ನು ಮಾತ್ರ ಫೇಸ್‌ಆ್ಯಪ್‌ನಲ್ಲಿ ಎಡಿಟ್ ಮಾಡುವುದು ಒಳ್ಳೆಯದು. ಫೇಸ್‌ಆ್ಯಪ್ ಮಾತ್ರವಲ್ಲ, ಅಂತಹ ಯಾವುದೇ ಆ್ಯಪ್ ಬಳಸುವ ಮುನ್ನ ಎಚ್ಚರಿಕೆ ವಹಿಸುವುದೂ ಸೂಕ್ತ. ಇಲ್ಲವಾದರೆ, ಖಾಸಗಿತನಕ್ಕೆ ಧಕ್ಕೆಯುಂಟಾಗುವುದು ಖಚಿತ. ■